ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/06/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com

ದಿನಾಂಕ: 05.12.2023

## <u>ಸುತ್ತೋಲೆ</u>

ವಿಷಯ: ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಸಮಯದಲ್ಲಿ "ಪ್ರಾಯೋಗಿಕ ಪರೀಕ್ಷಾ ಮುಖ್ಯ ಅಧೀಕ್ಷಕರು" ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 06/ಇಸಿಎಸ್(1) 2023 ದಿ:29.11.2023

*********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ **<u>ಪ್ರಾಯೋಗಿಕ ಪರೀಕ್ಷೆಗಳು: ದಿನಾಂಕ: 08.12.2023 ರಿಂದ 17.12.2023 ರವರೆಗೆ ಜರುಗಿಸಲು ತಿಳಿಸಲಾಗಿದೆ.</u>**

ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಡಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಿರುವ ಪ್ರಾಯೋಗಿಕ ಪರೀಕ್ಷಕರುಗಳಿಗೆ ವಿದ್ಯಾರ್ಥಿಗಳ ಬ್ಯಾಚ್‌ಗಳನ್ನು ಹಂಚುವಾಗ ಅವರ ಸೇವಾ ಹಿರಿತನ ಮತ್ತು ಬೋಧನಾನುಭವಗಳನ್ನು ಪರಿಗಣಿಸಿ ವಿದ್ಯಾರ್ಥಿಗಳ ಬ್ಯಾಚ್‌ಗಳನ್ನು ಸಮರ್ಪಕವಾಗಿ ಹಂಚುವುದು ಮತ್ತು ಆಯಾ ದಿನದ ಪರೀಕ್ಷಾ ವೇಳಾಪಟ್ಟಿ, ಪಠ್ಯಕ್ರಮ/ಸ್ಕೀಂ ಆಫ್ ಸ್ಟಡಿ/ಸ್ಕೀಂ ಆಫ್ ವ್ಯಾಲ್ಯುಯೇಷನ್ ಗಳನ್ನು ಸದರಿ ಪರೀಕ್ಷಕರಿಗೆ ನೀಡಿ ಅವರಿಂದ ಸಹಿ ಪಡೆಯಲು ಸೂಚಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆ ನಡೆಸುವ ಇಬ್ಬರೂ ಪರೀಕ್ಷಕರು ಪರೀಕ್ಷೆ ನಡೆಸಲು ಸಮಾನ ಹೊಣೆಗಾರರಾಗಿರುವ ಕಾರಣ, ಇಬ್ಬರೂ ಪರೀಕ್ಷಕರು ಒಟ್ಟಿಗೆ ಪರೀಕ್ಷಾ ಕೇಂದ್ರದ ಪ್ರಾಯೋಗಿಕ ಪರೀಕ್ಷೆಗಳ ಮುಖ್ಯ ಅಧೀಕ್ಷಕರಿಂದ ಪರೀಕ್ಷಾ ವೇಳಾಪಟ್ಟಿ, ಪಠ್ಯಕ್ರಮ/ಸ್ಕೀಂ ಆಫ್ ಸ್ಟಡಿ/ ಸ್ಕೀಂ ಆಫ್ ವ್ಯಾಲ್ಯುಯೇಷನ್ ಪಡೆದು, ಚರ್ಚಿಸಿ ನಿಷ್ಪಕ್ಷಪಾತ ಹಾಗೂ ಜವಾಬ್ದಾರಿಯಿಂದ ಪರೀಕ್ಷೆ ನಡೆಸಿ ಸ್ಕೀಂ ಆಫ್ ವ್ಯಾಲ್ಯುಯೇಷನ್ ಪ್ರಕಾರ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಲು ತಿಳಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ನಡೆಸಿ, ಡಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಮಾರ್ಕ್ಸ್‌ಲಿಸ್ಟ್‌ಗಳಲ್ಲಿನ ಅಂಕಗಳನ್ನು ಆಯಾ ದಿನದ ಅಂತ್ಯದಲ್ಲಿ ಕಡ್ಡಾಯವಾಗಿ ಕೀಯಿಂಗ್ ಮಾಡಿಸಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ಮುಖ್ಯ ಅಧೀಕ್ಷಕರುಗಳಿಗೆ ಸೂಚಿಸಲಾಗಿದೆ.

ಯಾವುದೇ ವಿದ್ಯಾರ್ಥಿ/ಗಳ ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ಡಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಅಂಕಗಳನ್ನು ಅಪ್ ಲೋಡ್ ಮಾಡಲು ಅವಕಾಶವಿರುವುದಿಲ್ಲವಾದ್ದರಿಂದ ಇದರಿಂದುಂಟಾಗುವ ಅನಾನುಕೂಲಗಳಿಗೆ/ ಕಾನೂನಾತ್ಮಕ ತೊಂದರೆಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಮುಖ್ಯ ಅಧೀಕ್ಷಕರುಗಳ ಮೇಲೆ ಉಲ್ಲೇಖಿತ ಸರ್ಕಾರಿ ಆದೇಶದನ್ವಯ ಶಿಸ್ತು ಜರುಗಿಸಲಾಗುವುದು.

**<u>ಪ್ರಾಯೋಗಿಕ ಪರೀಕ್ಷೆ ಮುಕ್ತಾಯವಾದ ತಕ್ಷಣವೇ ಪ್ರಾಯೋಗಿಕ ಪರೀಕ್ಷೆಗಳ ಮಾರ್ಕ್ಸ್‌ಲಿಸ್ಟ್ ಗಳನ್ನು ಬಣ್ಣದ ಬಟ್ಟೆಯಲ್ಲಿ</u>** <u>ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಮಂಡಳಿಗೆ **ಕಳುಹಿಸಿ ಕೊಡಲು ತಿಳಿಸಲಾಗಿದೆ ಮತ್ತು** ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಬಣ್ಣದ ಬಟ್ಟೆಯಲ್ಲಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ,</u> **<u>ಬಂಡಲ್‌ಗಳನ್ನು ದಿನಾಂಕ:20.12.2023 ರೊಳಗೆ ಮಂಡಳಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ</u>**.

ಮುಂದುವರೆದು ಸರ್ಕಾರಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು C-03, C-09 & C-15 ಪಠ್ಯಕ್ರಮಗಳ ಥಿಯರಿ ಪರೀಕ್ಷೆಗಳಿಗೆ ಸಂಬಂಧಪಟ್ಟ ಉತ್ತರ ಪತ್ರಿಕೆಗಳನ್ನು ಮಂಡಳಿಯಿಂದ ನೀಡಲಾದ ಮಾರ್ಗಸೂಚಿಗಳನ್ವಯ ಆಯಾ ದಿನದ ಥಿಯರಿ ಪರೀಕ್ಷೆಗಳು ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಅಂಚೆ ವಿಳಾಸವಾರು ವಿಂಗಡಿಸಿ (ಸೆಷನ್‌ವಾರು) ಪ್ರಶ್ನೆ ಪತ್ರಿಕೆ ಕೋಡ್ (QP Code) ಗಳಿಗೆ ಅನುಗುಣವಾಗಿ ಸೂಚಿಸಲಾಗುವ ನೋಡಲ್ ಪಾಲಿಟೆಕ್ನಿಕ್‌ಗಳ ಪ್ರಕಾರ ಬಂಡಲ್ ಮಾಡಿ Address Tag ನಲ್ಲಿ ಮುದ್ರಿತವಾಗುವ ನೋಡಲ್ ಕೇಂದ್ರ/ಗಳ ಅಂಚೆ ವಿಳಾಸ/ಗಳಿಗೆ ರವಾನಿಸಲು ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ/ ಪ್ರಾಯೋಗಿಕ ಪರೀಕ್ಷೆಯ ಮುಖ್ಯ ಅಧೀಕ್ಷಕರುಗಳಿಗೆ - ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ/ C-03, C-09 & C-15 ಪಠ್ಯಕ್ರಮದ ಥಿಯರಿ ಪರೀಕ್ಷೆಯ ಮುಖ್ಯ ಅಧೀಕ್ಷಕರುಗಳಿಗೆ -ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:

ಇ-ಗವರ್ನೆನ್ಸ್ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ - ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇಎಸಿ ವಿಭಾಗ
4. ಸಿಸ್ಟಂ ಅನಾಲಿಸ್ಟ್ - ಗಣಕ ಕೇಂದ್ರ
5. ಕಾರ್ಯದರ್ಶಿಯವರ ಆಪ್ತಶಾಖೆ